## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಂ/1577/2021
ಪಿ.ಓ. ಎಆರ್‌ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:02/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ. ಮಾಲತೇಶ ಗುಮಾಕರ ಬಿನ್ ನಿಂಗಪ್ಪ, ಗ್ರಾಮ ಲೆಕ್ಕಾಧಿಕಾರಿ, ಭೂವೀರಾಪುರ ಗ್ರಾಮ, ಕಳ್ಳಿಹಾಳ್/ಪ್ರಭಾರ ನೆಲೊಗಲ್, ಕಂದಾಯ ಇಲಾಖೆ ಹಾವೇರಿ ಜಿಲ್ಲೆರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.**

******

1. ಹಾವೇರಿ ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆಯ ಪೋಲಿಸ್ ಉಪಾಧೀಕ್ಷಕರು, (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಮಾಲತೇಶ ಗುಮಾಕರ ಬಿನ್ ನಿಂಗಪ್ಪ, ಗ್ರಾಮ ಲೆಕ್ಕಾಧಿಕಾರಿ, ಭೂವೀರಾಪುರ ಗ್ರಾಮ, ಕಳ್ಳಿಹಾಳ್/ಪ್ರಭಾರ ನೆಲೊಗಲ್, ಕಂದಾಯ ಇಲಾಖೆ ಹಾವೇರಿ, ಹಾವೇರಿ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ), ದೂರುದಾರರಾದ **ಶ್ರೀ. ಶಿವಲಿಂಗೇಶ ಬಿನ್ ದುರ್ಗಪ್ಪ, ಭೂವೀರಾಪುರ, ಹಾವೇರಿ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ದೂರುದಾರರು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಶಿವಲಿಂಗೇಶ ಬಿನ್ ದುರ್ಗಪ್ಪ, ಭೂವೀರಾಪುರ, ಹಾವೇರಿ** ಇವರ ತಂದೆಯವರಾದ ದುರುಗಪ್ಪ ಮಾದಾರ ಇವರು ಮೃತಹೊಂದಿದ್ದು, ಅವರ ಹೆಸರಿನಲ್ಲಿ ಭೂವೀರಾಪುರ ಗ್ರಾಮದಲ್ಲಿ ಒಂದು ಎಕರೆ ಇಪ್ಪತ್ತು ಗುಂಟೆ ಜಮೀನು ಇದ್ದು, ಸದರಿ ಜಮೀನನ್ನು

ದೂರುದಾರರ ತಾಯಿ ಪಾರ್ವತವ್ವ ಇವರ ಹೆಸರಿಗೆ ಖಾತೆ ಮಾಡಲು ದಿ: 26/02/2018ರಂದು ಅರ್ಜಿ ಸಲ್ಲಿಸಿದ್ದು, ನಂತರ ಎದುರುದಾರರನ್ನು ಭೇಟಿಮಾಡಿದಾಗ ಎದುರುದಾರರು ಮೊದಲು 5,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ನಂತರ ಎದುರುದಾರರು ನೀನು ನಮ್ಮೂರ ಹುಡುಗ 3,000/- ರೂ. ಕೊಡು ಎಂದು ಅರ್ಜಿಯ ಹಿಂದೆ ಬರೆದು ಇಟ್ಟುಕೊಂಡಿದ್ದು, ದೂರುದಾರರು ಇನ್ನೂ ಕಡಿಮೆಮಾಡಿಕೊಳ್ಳಿ ಅಂತ ಕೇಳಿದಾಗ ಎದುರುದಾರರು 100/- ರೂ. ಕಡಿಮೆ ಮಾಡಿಕೊಡು ಅಂತ ಹೇಳಿಕಳುಹಿಸಿರುತ್ತಾರೆ. ಆ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದು ಇರುತ್ತದೆ. ದೂರುದಾರರಿಗೆ ಮತ್ತು ಅವರ ತಾಯಿಯವರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ, ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ, ಸಿ.ಡಿ.ಯೊಂದಿಗೆ ದೂರುದಾರರು ಮತ್ತು ದೂರುದಾರರ ತಾಯಿ ದಿ:27/02/2018ರಂದು ಹಾವೇರಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ಲಿಖಿತ ದೂರನ್ನು ಸಿ.ಡಿ.ಯೊಂದಿಗೆ ಸಲ್ಲಿಸಿದ್ದು, ನಂತರ ಸದರಿ ಠಾಣೆಯ ಠಾಣಾಧಿಕಾರಿ ಅವರ ಠಾಣೆಯ ಗುನ್ನೆ ನಂ.5/2018ರಲ್ಲಿ ಕಲಂ 7, 13(1)(ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿನಾಂಕ 27/02/2018 ರಂದು ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಸಿ ಅವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ಸಾರಾಂಶವನ್ನು ತಿಳಿಸಿದ ನಂತರ ಪಂಚರುಗಳು ತನಿಖಾಧಿಕಾರಿಯವರಿಗೆ ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ತನಿಖಾಧಿಕಾರಿಯವರಿಗೆ ದೂರುದಾರರು ಮೊಬೈಲ್‌ನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರು ಅದರಲ್ಲಿ ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಕೇಳಿಸಿ, ನಂತರ ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮುಖಾಂತರ ಸಿ.ಡಿ.ಗೆ ವರ್ಗಾಯಿಸಿ, ಸದರಿ ಸಿ.ಡಿ.ಯನ್ನು ವಶಪಡಿಸಿಕೊಂಡಿರುತ್ತಾರೆ ಮತ್ತು ಮೊಬೈಲ್‌ನಲ್ಲಿದ್ದ ಸಂಭಾಷಣೆಗಳನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿಕೊಂಡಿರುತ್ತಾರೆ. ನಂತರ ದೂರುದಾರರು ಎದುರುದಾರರಿಗೆ ಲಂಚದ ಹಣ ಕೊಡಲು ತಂದಿದ್ದ 500/- ರೂ. ಮುಖಬೆಲೆಯ 6 ನೋಟುಗಳನ್ನು ಹಾಜರುಪಡಿಸಿದ್ದು, ಆ ನೋಟುಗಳನ್ನು

ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚರುಗಳು ಎಣಿಸಿ, ಆ ನೋಟುಗಳ ವಿವರಗಳನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ ಮತ್ತು ಪಂಚನಾಮೆಯಲ್ಲೂ ಸಹ ನಮೂದಿಸಿಕೊಂಡಿದ್ದು ಇರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿಯು ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ, ನಂತರ ಪಂಚ-1 ಶ್ರೀ. ಅಕ್ಷಯ್ ರವರು ಸದರಿ ನೋಟುಗಳನ್ನು ದೂರುದಾರರ ಪ್ಯಾಂಟಿನ ಎಡಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿಮುದ್ರಕವನ್ನು ಸಹ ನೀಡಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿ ಹೋಗಿ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ಲಂಚದ ಬಗ್ಗೆ ಪ್ರಸ್ತಾಪಿಸದರೆ ಮಾತ್ರ ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡಬೇಕೆಂದು, ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿದರೆ, ನಂತರ ಅಲ್ಲಿಂದ ಹೊರಬಂದು ಕರ್ಚೀಫ್‌ನಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಅವರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ತನಿಖಾಧಿಕಾರಿಯವರು ದೂರುದಾರರು, ದೂರುದಾರರ ತಾಯಿ, ನೆರಳು ಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

ಅದೇ ದಿನ ಅಂದರೆ ದಿ: 27/02/2018 ರಂದು ದೂರುದಾರರು, ದೂರುದಾರರ ತಾಯಿ ಮತ್ತು ನೆರಳುಸಾಕ್ಷಿಯೊಂದಿಗೆ ಆಟೋ ಹತ್ತಿಕೊಂಡು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ತನಿಖಾಧಿಕಾರಿ, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಇಲಾಖಾ ವಾಹನದಲ್ಲಿ ಎದುರುದಾರರ ಕಚೇರಿ ಬಳಿ ಬಂದು ಅಲ್ಲಲ್ಲಿ ಮರೆಯಾಗಿ ನಿಂತುಕೊಂಡಿರುತ್ತಾರೆ. ದೂರುದಾರರು ಇತರರೊಂದಿಗೆ ಕಚೇರಿ ಬಳಿ ಬಂದ ನಂತರ, ಅವರು ಬಂದಿರುವ ವಿಷಯವನ್ನು ಎದುರುದಾರರಿಗೆ ಫೋನ್‌ನಲ್ಲಿ ತಿಳಿಸಿದಾಗ, ಎದುರುದಾರರು ಅಲ್ಲಿಯೇ ಇರಿ, ಊಟಮಾಡಿ ಬರುವುದಾಗಿ ತಿಳಿಸಿದ್ದು, ಸ್ವಲ್ಪಹೊತ್ತಿನ ನಂತರ, ಎದುರುದಾರರು ದ್ವಿಚಕ್ರ ವಾಹನದಲ್ಲಿ ಕಚೇರಿಯ ಬಳಿ ಬಂದಿದ್ದು, ಆಗ ದೂರುದಾರರು ಅವರಿಗೆ ನೀಡಿದ್ದ ಧ್ವನಿಮುದ್ರಕವನ್ನು ಆನ್ ಮಾಡಿಕೊಂಡು ದೂರುದಾರರು ಮತ್ತು ದೂರುದಾರರ ತಾಯಿ ಎದುರುದಾರರ ಬಳಿ ಹೋಗಿ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು 3,000/- ರೂ. ತಂದಿರುವಿರಾ ಎಂದು ಕೇಳಿ. ನಂತರ ಆ ಹಣವನ್ನು ದೂರುದಾರರಿಂದ ಪಡೆದು ಎಣಿಸಿಕೊಂಡು, ಕಚೇರಿ ಒಳಗೆ ಹೋಗಿ ಟೇಬಲ್ ಮೇಲಿದ್ದ ಒಂದು ಹಳೆಯ ಬಟ್ಟೆಯ ಕೆಳಗೆ

ಇಟ್ಟುಕೊಂಡಿದ್ದು, ನಂತರ ದೂರುದಾರರು ಹೊರಬಂದು ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ. ಆಗ ತನಿಖಾಧಿಕಾರಿ, ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ಧಾವಿಸಿ ಬಂದು ಎದುರುದಾರರನ್ನು ಹಿಡಿದು ತನಿಖಾಧಿಕಾರಿಯು ಗುರುತಿನ ಚೀಟಿ ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ ಎದುರುದಾರರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ ಅದು ಟೇಬಲ್ ಮೇಲೆ ಬಟ್ಟೆಯ ಕೆಳಗೆ ಇರುವ ಮಾಹಿತಿ ನೀಡಿದ್ದು, ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಸದರಿ ದ್ರಾವಣವನ್ನು ಎರಡು ಬಟ್ಟಲುಗಳಲ್ಲಿ ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈಯನ್ನು ಅದ್ದಿಸಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈಯನ್ನು ಅದ್ದಿಸಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ಎರಡೂ ದ್ರಾವಣಗಳನ್ನು ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚ-1 ರವರ ಮುಖಾಂತರ ಎದುರುದಾರರು ಲಂಚದ ಹಣವನ್ನು ಇಟ್ಟಿದ್ದ ಜಾಗದಿಂದ ನೋಟುಗಳನ್ನು ತೆಗೆಸಿ, ಆ ನೋಟುಗಳನ್ನು ಪರಿಶೀಲಿಸಲಾಗಿ, ಆ ನೋಟುಗಳ ವಿವರಗಳು ಹಾಳೆಯಲ್ಲಿ ನಮೂದಿಸಿದ ವಿವರಗಳಿಗೂ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ವಿವರಗಳಿಗೂ ತಾಳೆಯಾಗುತ್ತಿರುವುದನ್ನು ಪಂಚ-1 ರವರು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯು ಆ ನೋಟುಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯು ಎದುರುದಾರರು ಲಂಚದ ಹಣವನ್ನು ಇಟ್ಟಿದ್ದ ಭಾಗವನ್ನು ಬಿಳಿಹತ್ತಿಯಿಂದ ಒರೆಸಿ, ಆ ಹತ್ತಿಯನ್ನು ಇನ್ನೊಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತೆಗೆದುಕೊಂಡು, ಆ ದ್ರಾವಣದಲ್ಲಿ ಹತ್ತಿಯನ್ನು ಅದ್ದಿಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಯು ದ್ರಾವಣವನ್ನು ಮತ್ತು ಆ ಬಟ್ಟೆಯನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯು ದೂರುದಾರರ ವಶದಲ್ಲಿದ್ದ, ವಾಯ್ಸ್ ರೆಕಾರ್ಡರ್‌ನಲ್ಲಿದ್ದ ಸಂಭಾಷಣೆಯನ್ನು ಕೇಳಿಸಿ, ನಂತರ ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ದೂರುದಾರರ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ.

ತನಿಖಾಧಿಕಾರಿಯು ಎದುರುದಾರರಿಗೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ದೂರುದಾರರು ಅವರ ತಂದೆ ಪವತಿ ಆದ ನಂತರ, ವಾರಸ ಖಾತೆ ಮಾಡಿಕೊಡಲು ಹೇಳಿದ್ದರು, ಆದರೆ ಇವತ್ತು ಮಧ್ಯಾಹ್ನ ದೂರುದಾರರು ಇದ್ದಕ್ಕಿದ್ದಂತೆ ಬಂದು ಎಷ್ಟು ಕೊಡಬೇಕು ಅಂತ ಕೇಳಿ, 3,000/- ರೂ. ಕೊಟ್ಟಿವಿ ಅಂತ ಹೇಳಿ, ಮೋಸಮಾಡಿರುತ್ತಾರೆಂದು ಹಾಗೂ ದುಡ್ಡು

ಕೇಳಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು, ದೂರುದಾರರ ತಾಯಿ ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ. ನಂತರ ತನಿಖಾಧಿಕಾರಿಗಿಯುವರು ಪಂಚರ ಸಮಕ್ಷಮ ಎದುರುದಾರರ ಮಾದರಿ ಧ್ವನಿಯನ್ನು ಪಡೆಯಲು ಎದುರುದಾರರಿಗೆ ಪ್ರತಿಯನ್ನು ನೀಡಿ ಓದಿ ಹೇಳಲು ತಿಳಿಸಿದಾಗ, ಅವರು ಆ ಪ್ರತಿಯನ್ನು ಓದುತ್ತಿದ್ದಾಗ, ಆ ಸಂಭಾಷಣೆಯ ಧ್ವನಿಯನ್ನು ಧ್ವನಿಮುದ್ರಕದಲ್ಲಿ ಧ್ವನಿಮುದ್ರಿಸಿಕೊಂಡಿದ್ದು, ನಂತರ ಸದರಿ ಧ್ವನಿಯನ್ನು ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ ಸಿ.ಡಿ.ಯನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಇತರೆ ಎಲ್ಲಾ ಕ್ರಮಗಳನ್ನು ಎಲ್ಲರ ಸಮಕ್ಷಮ ನಿರ್ವಹಿಸಿ, ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

iii) ನಂತರ, ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು, ರಾಸಾಯನಿಕ ತಜ್ಞರ ವರದಿಯನ್ನು ಮತ್ತು ಧ್ವನಿ ವಿಶ್ಲೇಷಣಾ ವರದಿಯನ್ನು ಪಡೆದು, ಎದುರುದಾರರ ವಿರುದ್ಧ ದೋಷರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಪಡೆಯಲಾಗಿದ್ದು, ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಅವರ ಸಮಜಾಯಿಷಿಯಲ್ಲಿ ಯಾವುದೇ ಒಬ್ಬ ಅರ್ಜಿದಾರನ ಮನೆಯವರು ಪವತಿಯಾದಾಗ, ತಹಶೀಲ್ದಾರ್ ಕಚೇರಿಯಲ್ಲಿ ಇರುವ ಭೂಮಿ, ಕಿಯಾಸ್ಕ ಕೇಂದ್ರಕ್ಕೆ ಅರ್ಜಿಯನ್ನು ದಾಖಲಿಸಿ, ಸ್ವೀಕೃತಿ ಪಡೆದ ನಂತರ ಭೂಮಿಕೇಂದ್ರದಲ್ಲಿ ಸಂಬಂಧಿಸಿದ ಭೂಮಿ ಶಿರಸ್ತೇದಾರರಿಂದ ಅನುಮೋದನೆ ಆದನಂತರ ಭೂಕಂದಾಯ ಅಧಿ ನಿಯಮದಡಿ, ಭೂಮಿ ಕೇಂದ್ರದಿಂದ ಅರ್ಜಿದಾರರಿಗೆ ನಮೂನೆ-21 ನ್ನು ಜಾರಿ ಮಾಡಲು ಮತ್ತು ಗ್ರಾಮ ಚಾವಡಿಯಲ್ಲಿ ಠರಾಯಿಸಲು ನಮೂನೆ-12 ನೀಡಿರುವುದಿಲ್ಲ ಮತ್ತು ದೂರುದಾರರ ಅರ್ಜಿ ಭೂಮಿ ಕಿಯಾಸ್ಕ ಕೇಂದ್ರದಲ್ಲಿ ದಾಖಲಾಗದೇ ಇರುವುದರಿಂದ ಲಂಚ ಬೇಡಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ. ಆದರೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಂತೆ ತನಿಖಾಧಿಕಾರಿಯವರು ಎದುರುದಾರರಿಂದ ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ಕಂಡುಬಂದಿರುತ್ತದೆ ಹಾಗೂ ಧ್ವನಿಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಎದುರುದಾರರು ನೀಡಿರುವ ಕಾರಣಗಳು ಈ ಪ್ರಕರಣದಿಂದ ಕೈಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ ಮತ್ತು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.